ಆರ್.ರಾಮಸ್ವಾಮಿ ಅಯ್ಯಂಗಾರ್, ಬೆಂಗಳೂರು

*ಸತ್ತವರ ಪಟಕ್ಕೆ ಹೂಮಾಲೆ ಹಾಕುತ್ತಾರೆ, ದೇವರ ಪಟಕ್ಕೂ ಹೂಮಾಲೆ ಹಾಕುತ್ತಾರೆ. ಹಾಗಾದರೆ ದೇವ....?*



ಮಗುವಿಗೆ ಹಲ್ಲಿರುವುದಿಲ್ಲ, ಅಜ್ಜನಿಗೂ. ಹಾಗಾದರೆ ಮಗು ಅಜ್ಜನೇ? ವಿಭಿನ್ನತೆಯೇ ಜೀವನ, ಭಿನ್ನತೆಯೇ ಮರಣ!

ಆರ್. ಮಧುಸೂದನ್, ಹಾಸನ

*ಬುದ್ಧಿಜೀವಿ ಎನ್ನುವ ಕಿರೀಟ ಹಾಕಿಕೊಂಡವರೇ ಹೆಚ್ಚಾಗಿ ವಿವಾದಗಳನ್ನು ಸೃಷ್ಟಿಸುತ್ತಾರಲ್ಲಾ, ಏಕೆ?*

ಕಿರೀಟದ ಕೆಳಗೆ ಕಿರಿಕಿರಿಯ ಬುದ್ಧಿಯೇ ಹೆಚ್ಚಾದ್ದರಿಂದ!

ಕುಮಾರ ಚಲವಾದಿ, ಹೊಳೆನರಸೀಪುರ

*ಮದುವೆಯಲ್ಲಿ ಸುಖ ಇದೆಯೋ, ಬ್ರಹ್ಮಚರ್ಯದಲ್ಲೋ?*

ಬ್ರಹ್ಮಚರ್ಯೆಯ ಸೋಗಿನಲ್ಲಿ ಮಠಾಧೀಶನಾಗುವಲ್ಲಿ!

ಕಂಡಕ್ಟರ್ ರಾಜು, ಗುಬ್ಬಿ

*ಫೇಸ್‌ಬುಕ್‌ನಲ್ಲಿದ್ದಾಳೆ, ಮೊಬೈಲ್‌ಗೆ ಬರುತ್ತಿಲ್ಲವಲ್ಲ, ಯಾಕೆ?*

ಬರ್‍ಬೇಕೂಂತಿದ್ಳಂತೆ ಕಂಡಕ್ಟ್ರೇ, ಆದರೆ ನೀವು ಚಿಲ್ರೆ ವಿಷಯಕ್ಕೆಲ್ಲಾ ತಲೆ ಕೆಡಿಸ್ಕೊಳ್ಳೋದು ನೋಡಿ ಬರಲಿಲ್ಲವಂತೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಪಾರ್ವತಿಯನ್ನು ಮಗ್ಗುಲಲ್ಲಿ ಕೂಡಿಸಿಕೊಂಡ ಶಿವ ಗಂಗೆಯನ್ನು ಜಡೆಯಲ್ಲೇಕೆ ಕೂಡಿಸಿಕೊಂಡ?*

ಅವನೆಲ್ಲಿ ಕೂಡಿಸಿಕೊಂಡ? ಎರಡನೆಯ ಹೆಂಡತಿ ತಲೆ ತಿನ್ನುವುದು ಜಾಸ್ತಿಯಲ್ಲವೇ, ನೇರವಾಗಿ ತಲೆ ತಿನ್ನಲು ಅವಳೇ ಹತ್ತಿ ಕೂತಳು!

ಲ್ಯಾಂಡ್ ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು

*ನಗುವಿಗೆ ತೆರಿಗೆ ಕಟ್ಟುವಂತಿದ್ದರೆ?*



ಎಡ್ಡಿ, ಗೌಡರಿಗೆ ಟ್ಯಾಕ್ಸ್ ಫ್ರೀ ಸರ್ಟಿಫಿಕೇಟ್ ದೊರಕುತ್ತಿತ್ತು!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ

*ಮನುಷ್ಯರ ವಿವಾಹ ಸ್ವರ್ಗದಲ್ಲಾದರೆ ದೇವರ ವಿವಾಹ ಎಲ್ಲಿ ಆಗಿರುತ್ತದೆ?*

ಭೂಮಿಯಲ್ಲಿ; ಅದೂ ಅದೇ ಶ್ರೀನಿವಾಸನನ್ನು ಅದೇ ಪದ್ಮಾವತಿಗೆ ಕೊಟ್ಟು ದಿನವೂ ಮದುವೆ!

ಎಂ.ಸಿ. ನಾಗರತ್ನ, ಶಿವಮೊಗ್ಗ

*ಮುಗ್ಧತೆಗೂ, ದಡ್ಡತನಕ್ಕೂ ಇರುವ ವ್ಯತ್ಯಾಸವೇನು ಸರ್?*

ಪ್ರಿಯಕರ ಹೇಳಿದ್ದೆಲ್ಲವನ್ನೂ ನಂಬುವುದು ಮುಗ್ಧತೆ, ಹೇಳಿದುದನ್ನೆಲ್ಲಾ ಮಾಡುವುದು ದಡ್ಡತನ!

ಎನ್.ವಿ. ಶ್ರೀನಿವಾಸ್, ಮೈಸೂರು

*ಸೋತ ಎತ್ತಿನ ಬಾಲ ಹಿಡಿದರೆ ಏನಾಗುತ್ತದೆ?*

ಹೆಚ್ಚೆಂದರೆ ಒಂದಿಷ್ಟು ಸಗಣಿ ಸಿಗುತ್ತದೆ!

ಬಿ.ವಿ. ನಾರಾಯಣ್, ಬೆಳಗೊಳ

*ಪಾಪಿ ಚಿರಾಯು; ಪುಣ್ಯವಂತ...?*

ನರಳದೆ ತೆರಳಿದವನು!

ಎಚ್.ಆನಂದಕುಮಾರ್, ಚಿತ್ರದುರ್ಗ

*ಮಿಸ್ಟರ್ ರಾಮ್, ನಿಮ್ಮದು ರಾಮನಾಮ, ಉತ್ತರವೆಲ್ಲಾ ಕೃಷ್ಣನ ಧಾಟಿ. ಇದು ಹೇಗೆ?*

ತ್ರೇತಾಯುಗದ ಪಾಯಸಕ್ಕೆ ದ್ವಾಪರಯುಗ ಸಕ್ಕರೆ ಬೆರೆಸಿದರೆ ಕಲಿಯುಗದ ನ-ಕಲಿಗಳಿಗೆ ಪ್ರಿಯವಂತೆ!

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ನಿಮ್ಮ ದಾನವನುಂಡು ಅನ್ಯರ ಪೊಗಳುವ ಕುನ್ನಿಗಳನೇನೆಂಬೆ ರಾಮ್?*

ಪರಾಕು ಪದದೊಳ್ ಪರ ವೇ ಅಡಗಿರಲ್ ಕುನ್ನಿ ಬೌ ಪರಾಕ್ ಎಂಬುದು ಅನ್ಯರಿಗೇ ಗಡ!

ಲೂಯಿಸ್ ಫರ್ನಾಂಡಿಸ್, ಶಿರಸಿ

*ನಾವು ಶುದ್ಧ ಕನ್ನಡದಲ್ಲಿ ಪ್ರಶ್ನೆ ಕೇಳಿದರೆ ನೀವು ಆಂಗ್ಲ ಮಿಶ್ರಿತ ಕನ್ನಡದಲ್ಲಿ ಉತ್ತರಿಸುತ್ತೀರಿ; ಏಕೆ ಸ್ವಾಮಿ?*

ಬಹುತೇಕ ಕನ್ನಡಿಗ ಓದುಗರಿಗೆ ತಿಳಿಯಲೆಂಬ ಇಂಟೆನ್ಷನ್ನು!

ಜೀವಿ, ಗೊಂಡೇದಹಳ್ಳಿ

*ಶೇ 70ರಷ್ಟು ಮಹಿಳೆಯರೂ ಕೂಡ ಕಚೇರಿಗಳಲ್ಲಿ ಬಾಸ್ ಆಗಿ ಪುರುಷರೇ ಇರಬೇಕೆಂದು ಬಯಸಿದ್ದಾರಲ್ಲ?*

ಮನೆಯಲ್ಲಂತೂ ಸಾಧ್ಯವಿಲ್ಲ, ಅಲ್ಲಾದರೂ ಆಗಿರಲೆಂಬ ಉದಾರ ಮನೋಭಾವ!

ನಾ.ರಾ.ಕೃ. ರೆಡ್ಡಿ, ನಾರಾಯಣಘಟ್ಟ

*ಲಾಯರ್ ಆಗಬೇಕೆಂದು ಆಸೆ. ಏನನ್ನು ಓದಬೇಕು ಮತ್ತು ಏನೆಲ್ಲಾ ಕಲಿಯಬೇಕು?*

ಬೆಂಗಳೂರಿನಲ್ಲಾದರೆ ಕಲಿತುಕೊಳ್ಳುವುದಕ್ಕಿಂತಲೂ ಕಲೆತು ಕೊಲ್ಲುವುದನ್ನು ಕಲಿತರೆ ಸಾಕಂತೆ!

## ಬಹುಮಾನಿತ ಪ್ರಶ್ನೆ

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಬ್ರಹ್ಮಚಾರಿಗಳಿಗೆ ನೀಲಿಬಣ್ಣದ ಚಿತ್ರಗಳನ್ನು ನೋಡಲು ಕೊಟ್ಟರೆ ಏನಾಗುತ್ತದೆ?*

ತಿಂಗಳಿನ ಕರೆಂಟ್ ಬಿಲ್ ಹೆಚ್ಚಾಗುತ್ತದೆ!

ಡಿ.ಎಲ್. ಶ್ವೇತಾ, ಚನ್ನಗಿರಿ

*ಸಂಕ್ರಾಂತಿ ಯಲ್ಲೇ ಕ್ರಾಂತಿ ಇದೆಯಲ್ಲಾ...?*

ಕ್ರಾಂತಿ ಗೆ ಎಳ್ಳು ನೀರು ಬಿಡಿ, sum ಉಳಿಸಿಕೊಳ್ಳಿ!

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

*ಸಾವಿನ ಸತ್ಯ ಗೊತ್ತಿದ್ದೂ ನಾವು ಇಷ್ಟು ಹೊಡೆದಾಡೋದ್ಯಾಕೆ?*

ಬ್ರೇಕಿಂಗ್ ನ್ಯೂಸ್ ಮೂಲಕ ಪ್ರಸಿದ್ಧರಾಗಲು!

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಜಗಳವೇ ಇಲ್ಲದೆ ಬದುಕಲು ಏನು ಮಾಡಬೇಕು?*

ಜಗತ್ತಿಗೇ ಹೌದಪ್ಪ, ಆದರೆ ಸಾಕಪ್ಪ!

ಎನ್. ವಸಂತ, ಕತ್ತರಗುಪ್ಪ

*ರಾಜಕೀಯ ಧುರೀಣರಿಗೆ ಖಡ್ಗವನ್ನು ಉಡುಗೊರೆಯಾಗಿ ಕೊಡುವ ಉದ್ದೇಶವೇನು ಅಣ್ಣಯ್ಯಾ?*



ಅವರದು ಖಡ್ಗಮೃಗಕ್ಕಿಂತಲೂ ದಪ್ಪವಾದ ಚರ್ಮ ಎಂದು ಸೂಚಿಸಲು!

ವಿ. ಹಮೀದ್, ವಿಟ್ಲ

*ಹೃದಯ ಹೃದಯ ಬೆರೆತಾಗ...?*

ಪ್ರೇಮ ಕಾಮಗಳ ಕಲಬೆರಕೆ!

ಕೆ. ಚಂದ್ರಶೇಖರ, ಕೋಣನಕುಂಟೆ

*ಆರು ಕೊಟ್ಟರೆ ಅತ್ತೆ ಕಡೆ, ಮೂರು ಕೊಟ್ಟರೆ ಸೊಸೆ ಕಡೆ; ಒಂಬತ್ತೂ ನುಂಗಿ ನೊಣೆಯುವ ನೀವು ಯಾರ ಕಡೆ?*

ಇಬ್ಬರಿಂದಲೂ ಉಗಿಸಿಕೊಂಡು ಮುಳುಗಡೆ!

■ ರಾಮ್